**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 366/2025**

**ಚಾ.ಸಾ- 1**
**ಪ್ರಾ.ಸಾ - 3**

**ಸಾಕ್ಷಿಗೆ ದಿನಾಂಕ 24-12-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಕರುಣಾಸಾಗರ |
| ತಂದೆಯ ಹೆಸರು | ಃ | ನಾಗಣ್ಣ |
| ವಯಸ್ಸು | ಃ | 36 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಆಂದೋಲಾ |

**ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತಿಲ್ಲ. ಚಾಸಾ-9 ನನ್ನ ತಾಯಿ ಆಗಬೇಕು. ಚಾಸಾ-10 ನನ್ನ ಅಜ್ಜಿಯಾಗಬೇಕು. ಚಾಸಾ-12 ನನ್ನ ತಂಗಿಯಾಗಬೇಕು. ಚಾಸಾ-11 ಮತ್ತು 13 ಗೊತ್ತಿಲ್ಲ.

4-5 ತಿಂಗಳ ಹಿಂದೆ ನಾವು ಆಂದೋಲಾದಲ್ಲಿ ಇದ್ದೆವು. ಆಗ ಬೆಳಿಗ್ಗೆ 7 ಗಂಟೆಗೆ ಚಾಸಾ-9ರವರು ಫೋನ್ ಮಾಡಿ ಬಂಗಾರ ಕಳವು ಆಗಿದೆ ಎಂದು ತಿಳಿಸಿದರು. ತಕ್ಷಣ ನಾನು ಬಣಮಿಗಿ ಗ್ರಾಮಕ್ಕೆ ಹೋಗಿ ನೋಡಿ ನಂತರ ಜೇವರ್ಗಿಗೆ ಬಂದು ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ.

ಚಾಸಾ-9ರವರ 3 ತೊಲೆ ಬಂಗಾರ ಮತ್ತು ಚಾಸಾ-10ರವರ 14 ತೊಲೆ ಬಂಗಾರ ಕಳವು ಆಗಿತ್ತು. ದೂರು ನೀಡಿದ ನಂತರ ಬಂಗಾರವನ್ನು ಯಾರು ಕಳ್ಳತನ ಮಾಡಿದ್ದಾರೆ ಎಂದು ಗೊತ್ತಾಗಿಲ್ಲ. ನಾನು ಪೊಲೀಸರಿಗೆ ಮರುಹೇಳಿಕೆ ನೀಡಿಲ್ಲ.

ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದೂರನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ನಿಪಿ-1 ದೂರಿನಲ್ಲಿ ಬರೆದಂತಹ ವಿಚಾರಗಳು ನನಗೆ ಗೊತ್ತಿಲ್ಲ.

ಸಾಕ್ಷಿಗೆ ನಿಪಿ-1 ಗುನ್ನ ಸ್ಥಳದ ಪಂಚನಾಮೆ ಮತ್ತು ನಿಪಿ-2 ಕಚ್ಚಾ ನಕಾಶೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಸಹಿಗಳನ್ನು ನಿಪಿ-1(ಸಿ), 2(ಸಿ) ಎಂದು ಗುರುತಿಸಲಾಯಿತು.

(ಮಾನ್ಯ ಸ.ಸ.ಅ ರವರು ಸಾಕ್ಷಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ**

ದಿಃ 17-05-2025ರಂದು ರಾತ್ರಿಯಿಂದ ಬೆಳಗಿನ ಜಾವ 5 ಗಂಟೆ ಅವಧಿಯಲ್ಲಿ ಚಾಸಾ-9 ಮತ್ತು 10 ರವರು ಒಟ್ಟು 17 ತೊಲೆ ಬಂಗಾರವನ್ನು ಒಂದು ಬ್ಯಾಗಿನಲ್ಲಿ ಇಟ್ಟು ಮಹೇಶ ಎನ್ನುವವರ ರೂಮಿನಲ್ಲಿ ಮಲಗಿರುತ್ತಾರೆ ಎಂದರೆ ಸರಿ. ಬೆಳಿಗ್ಗೆ 7 ಗಂಟೆಗೆ ಸದರಿ ಬ್ಯಾಗನ್ನು ಪರಿಶೀಲನೆ ಮಾಡಿದಾಗ ಅದರಲ್ಲಿ ಬಂಗಾರ ಇರಲಿಲ್ಲ ಎಂದರೆ ಸರಿ. ಚಾಸಾ-10ರವರಿಗೆ ಸೇರಿದಂತಹ 3 ತೊಲೆಯ ಎರಡು ಬಂಗಾರದ ಬಳೆಗಳು, 6 ತೊಲೆಯ ಬಂಗಾರದ ಸರ, 2 ತೊಲೆಯ ಬಂಗಾರದ ಗುಂಡಿನ ಸರ ಮತ್ತು ಚಾಸಾ-9ರವರಿಗೆ ಸೇರಿದಂತಹ 3 ತೊಲೆ ಬಂಗಾರ ಕಳ್ಳತನ ಆಗಿದ ಎಂದು ದೂರು ನೀಡಿದ್ದೀರಿ ಎಂದರೆ ಸರಿ. ನಾನು ದೂರನ್ನು ನೀಡಿದ ಮರುದಿನ ಪೊಲೀಸರು ಬಂದು ನಾನು ತೋರಿಸಿದಂತಹ ಜಾಗದಲ್ಲಿ ನಿಪಿ-1 ರಂತೆ ಪಂಚನಾಮೆ ಮಾಡಿ ನಿಪಿ-2 ರಂತೆ ಕಚ್ಚಾನಕಾಶೆ ತಯಾರು ಮಾಡಿರುತ್ತಾರೆ ಎಂದರೆ ಸರಿ. ಪಂಚನಾಮೆ ಮಾಡುವ ಸಮಯದಲ್ಲಿ ನಿಪಿ-3 ಮತ್ತು 4ರ ಫೋಟೊ ತೆಗೆದಿರುತ್ತಾರೆ ಎಂದರೆ ಸರಿ.

ದಿನಾಂಕ 18-06-2025ರಂದು ಆರೋಪಿತಳನ್ನು ತೋರಿಸಿದ ವಿಚಾರವಾಗಿ ಮರುಹೇಳಿಕೆ ನೀಡಿರುತ್ತೀರಿ ಎಂದರೆ ಸರಿಯಲ್ಲ. ಸದರಿ ಮರುಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು.

ನಿಮಗೆ ಈ ಪ್ರಕರಣದ ಬಗ್ಗೆ ಎಲ್ಲಾ ಗೊತ್ತಿದ್ದರೂ ಸಹ ಆರೋಪಿತಳು ನಿಮ್ಮ ಸಂಬಂಧಿಕಳು ಆಗಿದ್ದರಿಂದ ಅವಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದಃ ಇರುವುದಿಲ್ಲ.**

ಮರುವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಜೇವರಗಿ

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 366/2025**

**ಚಾ.ಸಾ- 9**
**ಪ್ರಾ.ಸಾ - 4**

**ಸಾಕ್ಷಿಗೆ ದಿನಾಂಕ 24-12-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಪಾರ್ವತಿ |
| ಗಂಡನ ಹೆಸರು | ಃ | ನಾಗಣ್ಣ |
| ವಯಸ್ಸು | ಃ | 50 ವರ್ಷ |
| ಉದ್ಯೋಗ | ಃ | ಮನೆಕೆಲಸ |
| ವಾಸಸ್ಥಳ | ಃ | ಆಂದೋಲಾ |

**ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತಿಲ್ಲ. ಚಾಸಾ-1 ನನ್ನ ಮಗ ಆಗಬೇಕು. ಚಾಸಾ-10 ನನ್ನ ಅತ್ತೆಯಾಗಬೇಕು. ಚಾಸಾ-11 ರಿಂದ 13 ಗೊತ್ತಿಲ್ಲ.

ಸುಮಾರು 8 ತಿಂಗಳ ಹಿಂದೆ ಮದುವೆಗಾಗಿ ನಾನು ಮತ್ತು ಚಾಸಾ-10 ರವರು ಮದುವೆಗೆ ಹೋಗಿದ್ದೆವು. ಬಂಗಾರ ಇಟ್ಟಿದ್ದೆವು ಅದು ಕಳವು ಆಗಿತ್ತು. ನಂತರ ಚಾಸಾ-1 ದೂರು ನೀಡಿರುತ್ತಾರೆ. ನನ್ನ 3 ತೊಲೆ ಬಂಗಾರದ ತಾಳಿಸಾಮಾನು ಮತ್ತು ಚಾಸಾ-10ರವರ ಬಂಗಾರದ ಗುಂಡಿನ ಸರ, 4 ಎಳೆ ಬಂಗಾರದ ತೊಳೆ ಇತ್ತು. ಕಳವು ಆದಂತಹ ಬಂಗಾರ ನಮಗೆ ಸಿಕ್ಕಿರುತ್ತದೆ. ಸದರಿ ಬಂಗಾರವನ್ನು ಯಾರು ಕಳವುಮಾಡಿದ್ದರು ಎಂದು ಗೊತ್ತಿಲ್ಲ. ನಾನು ಪೊಲೀಸರಿಗೆ ಹೇಳಿಕೆ ಮತ್ತು ಮರುಹೇಳಿಕೆ ನೀಡಿಲ್ಲ.

(ಮಾನ್ಯ ಸ.ಸ.ಅ ರವರು ಸಾಕ್ಷಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ  ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ**

ದಿಃ 17-05-2025ರಂದು ರಾತ್ರಿ ನೀವು ಮತ್ತು ಚಾಸಾ-10ರವರು ಮಹೇಶನ ರೂಮಿನಲ್ಲಿ ಮಲಗವಾಗ ನೀವು ಮತ್ತು ಚಾಸಾ-10 ರವರು ನಿಮ್ಮ ಬಂಗಾರವನ್ನು ದಸ್ತಿಯಲ್ಲಿ ಕಟ್ಟಿ ಬ್ಯಾಗಿನಲ್ಲಿ ಇಟ್ಟಿದ್ದೀರಿ ಎಂದರೆ ಸರಿ. ಬೆಳಿಗ್ಗೆ ನೋಡಿದಾಗ ಸದರಿ ಬ್ಯಾಗ್ ಇರಲಿಲ್ಲ ಎಂದರೆ ಸರಿ. ಕಳ್ಳತನವಾದ ಬಗ್ಗೆ ನೀವು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೀರಿ ಎಂದರೆ ಸರಿ.

ದಿನಾಂಕ 18-06-2025ರಂದು ನ್ಯಾಯಾಲಯದ ಮುಂದಿರುವ ಆರೋಪಿತಳನ್ನು ತೋರಿಸಿ ಇವರೇ ಕಳ್ಳತನ ಮಾಡಿದ್ದಾರೆ ಎಂದು ತೋರಿಸಿದ ವಿಚಾರವಾಗಿ ಮರುಹೇಳಿಕೆ ನೀಡಿರುತ್ತೀರಿ ಎಂದರೆ ಗೊತ್ತಿಲ್ಲ. ಸದರಿ ಮರುಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು.

ನಿಮಗೆ ಈ ಪ್ರಕರಣದ ಬಗ್ಗೆ ಎಲ್ಲಾ ಗೊತ್ತಿದ್ದರೂ ಸಹ ಆರೋಪಿತಳು ನಿಮ್ಮ ಸಂಬಂಧಿಕಳು ಆಗಿದ್ದರಿಂದ ಅವಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದಃ ಇರುವುದಿಲ್ಲ.**

ಮರುವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಜೇವರಗಿ

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 366/2025**

**ಚಾ.ಸಾ- 10**
**ಪ್ರಾ.ಸಾ - 5**

**ಸಾಕ್ಷಿಗೆ ದಿನಾಂಕ 24-12-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ವಿಜಯಲಕ್ಷ್ಮೀ |
| ಗಂಡನ ಹೆಸರು | ಃ | ಶಂಕರಗೌಡ |
| ವಯಸ್ಸು | ಃ | 60 ವರ್ಷ |
| ಉದ್ಯೋಗ | ಃ | ಮನೆಕೆಲಸ |
| ವಾಸಸ್ಥಳ | ಃ | ಗುಲ್ಬರ್ಗಾ |

**ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತಿಲ್ಲ. ಚಾಸಾ-1 ನನ್ನ ಮೊಮ್ಮಗ ಆಗಬೇಕು. ಚಾಸಾ-9 ನನ್ನ ಸೊಸೆಯಾಗಬೇಕು. ಚಾಸಾ-11 ರಿಂದ 13 ಗೊತ್ತು.

ಸುಮಾರು 6 ತಿಂಗಳ ಹಿಂದೆ ಮದುವೆಗಾಗಿ ಬಣಮಿಗಿಗೆ ನಾನು ಮತ್ತು ಚಾಸಾ-9ರವರು ಹೋಗಿದ್ದೆವು. ಅಲ್ಲಿ ನಮ್ಮ ಬಂಗಾರ ಇಟ್ಟಿದ್ದೆವು ಅದು ಕಳವು ಆಗಿತ್ತು. ನನ್ನ 2 ಬಂಗಾರದ ಬಳೆಗಳು, ಒಂದು ಬಂಗಾರದ ಗುಂಡಿನ ಸರ ಮತ್ತು ಇನ್ನೊಂದು ಸರ ಕಳವು ಆಗಿತ್ತು. ಚಾಸಾ-9ರವರಿಗೆ ಸಂಬಂಧಪಟ್ಟ ತಾಳಿ ಸರ ಕಳವು ಆಗಿತ್ತು. ಚಾಸಾ-1ರವರು ಕೇಸ್ ಮಾಡಿದರು. ಪೊಲೀಸರು ಕರೆಯಿಸಿ ಬಂಗಾರವನ್ನು ಕೊಟ್ಟಿರುತ್ತಾರೆ. ಸದರಿ ಬಂಗಾರವನ್ನು ಯಾರು ಕಳವು ಮಾಡಿದ್ದರು ಎಂದು ಗೊತ್ತಿಲ್ಲ. ನಾನು ಪೊಲೀಸರಿಗೆ ಹೇಳಿಕೆ ಮತ್ತು ಮರುಹೇಳಿಕೆ ನೀಡಿಲ್ಲ.

(ಮಾನ್ಯ ಸ.ಸ.ಅ ರವರು ಸಾಕ್ಷಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ**

ದಿಃ 17-05-2025ರಂದು ರಾತ್ರಿ ನೀವು ಮತ್ತು ಚಾಸಾ-9ರವರು ಮಹೇಶನ ರೂಮಿನಲ್ಲಿ ಮಲಗವಾಗ ನೀವು ಮತ್ತು ಚಾಸಾ-9 ರವರು ನಿಮ್ಮ ಬಂಗಾರವನ್ನು ದಸ್ತಿಯಲ್ಲಿ ಕಟ್ಟಿ ಬ್ಯಾಗಿನಲ್ಲಿ ಇಟ್ಟಿದ್ದೀರಿ ಎಂದರೆ ಸರಿ. ಬೆಳಿಗ್ಗೆ ನೋಡಿದಾಗ ಸದರಿ ಬ್ಯಾಗ್ ಇರಲಿಲ್ಲ ಎಂದರೆ ಸರಿ. ಕಳ್ಳತನವಾದ ಬಗ್ಗೆ ನೀವು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೀರಿ ಎಂದರೆ ಸರಿ.

ದಿನಾಂಕ 18-06-2025ರಂದು ನ್ಯಾಯಾಲಯದ ಮುಂದಿರುವ ಆರೋಪಿತಳನ್ನು ತೋರಿಸಿ ಇವರೇ ಕಳ್ಳತನ ಮಾಡಿದ್ದಾರೆ ಎಂದು ತೋರಿಸಿದ ವಿಚಾರವಾಗಿ ಮರುಹೇಳಿಕೆ ನೀಡಿರುತ್ತೀರಿ ಎಂದರೆ ಗೊತ್ತಿಲ್ಲ. ಸದರಿ ಮರುಹೇಳಿಕೆಯನ್ನು ನಿಪಿ-8 ಎಂದು ಗುರುತಿಸಲಾಯಿತು.

ನಿಮಗೆ ಈ ಪ್ರಕರಣದ ಬಗ್ಗೆ ಎಲ್ಲಾ ಗೊತ್ತಿದ್ದರೂ ಸಹ ಆರೋಪಿತಳು ನಿಮ್ಮ ಸಂಬಂಧಿಕಳು ಆಗಿದ್ದರಿಂದ ಅವಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದಃ ಇರುವುದಿಲ್ಲ.**

ಮರುವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಜೇವರಗಿ